ಮಾಧುರಿ ನಾಯಿಕ, ಬೆಳಗಾವಿ
*ವ್ಯಾಟ್ಸ್ ಆ್ಯಪ್, ಫೇಸ್ಬುಕ್, ಇನ್ಸ್‌ಟಾಗ್ರಾಮ್‌ಗಳಿಗಿಂತಲೂ ಬಲಿಷ್ಠವಾದ ಮಾಧ್ಯಮ ಇದೆಯಾ?*



ಕಿಟ್ಟಿಪಾರ್ಟಿ! ಜಗಕ್ಕೇ ತಿಳಿಯದ ಇನ್‌ಸೈಡ್ ಸ್ಟೋರಿ+ಎಕ್ಸ್‌ಪರ್ಟ್ ಕಾಮೆಂಟ್ಸ್ ಇಲ್ಲಿ ಲಭ್ಯ.

ಅಮೃತೇಶ್ ತಂಡರ, ಅಣ್ಣಿಗೇರಿ
*ಪಾಂಚಾಲಿ ಪಂಚಕನ್ಯೆಯರಲ್ಲಿ ಎಣಿಸಲ್ಪಟ್ಟು ಸ್ಮರಣೀಯಳಾಗುತ್ತಾಳಲ್ಲಾ...?*
ಗಟ್ಟಿಗಿತ್ತಿ ಎನ್ನಿ. ಒಬ್ಬನನ್ನು ಕಟ್ಟಿಕೊಂಡೇ ಸಂಭಾಳಿಸುವುದು ಕಷ್ಟ, ಐದು ವಿಚಿತ್ರಗಳನ್ನು ಸಂಭಾಳಿಸಿದಳಲ್ಲ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ನಮ್ಮ ಮುಂದಿನ ಮಾದರಿ ನಾಯಕರು ಹೇಗಿದ್ದರೆ ಚೆನ್ನ ರಾಮ್‌ಜೀ?*
ಗೌಡರ ಚಾಣಾಕ್ಷತೆ, ಮೋದಿಯ ಎದೆಗಾರಿಕೆ, ಸಿದ್ದರಾಮಯ್ಯರ ಛಲ, ವಾಜಪೇಯಿಯ ಸರಳತೆ ಇರಬೇಕು.

ರಮಾನಂದ ಶರ್ಮ, ಬೆಂಗಳೂರು
*ಕರ್ನಾಟಕ ರಾಜಕೀಯದಲ್ಲಿ ಕೆಲವರಿಗೆ ಬಹುವಚನ ಪ್ರಯೋಗ ಅಪರಾಧವೆ?*



ಹೌದು. ಪ್ರಾಣಿಗಳನ್ನು 'ನಾಯಿಯವರೆ', 'ಆನೆಯವರೆ' ಎಂದೆಲ್ಲ ಕರೆಯುವುದು ವ್ಯಾಕರಣ-ಬಾಹಿರ.

ಎಚ್. ಆನಂದಕುಮಾರ್, ಚಿತ್ರದುರ್ಗ
*ಚುನಾವಣೆ 'ಕಾವು' ಆದರೆ ಫಲಿತಾಂಶಕ್ಕೆ ಏನೆನ್ನಬೇಕು ರಾಮ್ ಶಿವಾ?*
ಸೋತವನು ಹೊರಸಿಡಿದು ನೆಲ ಸೇರಿದ ಸೀಕಲು; ಗೆದ್ದವನು 'ಹುರಿಯಾಳು'.

ಬಿ. ಚಂದ್ರೇಗೌಡ, ಬೆಂಗಳೂರು
*ಸಂಸಾರಿಗಳು ರಾಜಕೀಯ ಪ್ರವೇಶಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದರೆ ಹೇಗಿರುತ್ತದೆ?*
ಅನೈತಿಕತೆಗೆ ಮುಕ್ತ ಪ್ರವೇಶ ಎಂದು ಬೋರ್ಡ್ ಹಾಕಿದಂತಾಗುತ್ತದೆ.

ರವಿ ಎಂ. ಪೈ, ಹೊನ್ನಾವರ
*ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯಂ ಅಂತಾರಲ್ಲ, ಇದರಲ್ಲಿ ಪತಿಯೇ ಇಲ್ಲವಲ್ಲ...?*
'ಪಶು ಎಂದು ಇದೆಯಲ್ಲ, ಅದೇ' ಎನ್ನುತ್ತಾರೆ ಖ್ಯಾತ ವಾಗ್ಮಿ ವೈ.ವಿ. ಗುಂಡೂರಾವ್.

ಮಹಾವೀರ ಕಾಸರ, ಶಿವಮೊಗ್ಗ
*ಎರಡು ಕಡೆ ಮತದಾರರ ಪಟ್ಟಿಯಲ್ಲಿ ಹೆಸರಿರುವುದು ತಪ್ಪಾದರೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದು ಏಕೆ ತಪ್ಪಲ್ಲ?*
ಹುಚ್ಚುನಾಯಿ ಕಚ್ಚುತ್ತದೆಂದು ಮನುಷ್ಯನೂ ಕಚ್ಚಲು ಹೋಗುವುದು ತರವಲ್ಲ.

ವಿ. ಹಮೀದ್, ವಿಟ್ಲ
*ಬಾರ್‌ಗಳನ್ನು ಗಂಡಸರ ತವರುಮನೆ ಅನ್ನುತ್ತಾರಲ್ಲ, ಏಕೆ?*
ತ – ತಪ್ಪುಹೆಜ್ಜೆ; ವ – ವಟವಟ; ರು – ರುಗ್ಣಾವಸ್ಥೆ ಅಲ್ಲಿಂದಲೇ ಆರಂಭವಾಗುವುದರಿಂದ.

ಬಿ.ಆರ್. ಸುರೇಶ್, ಶಿವಮೊಗ್ಗ
*ಹುಡುಗಿಯರು ತುಟಿಗೆ ದಪ್ಪವಾಗಿ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವುದರಿಂದ ಏನು ಪ್ರಯೋಜನ?*
ಅದು ಹುಡುಗರ ನೋಟವನ್ನು ತುಟಿಯ ಮಟ್ಟದಲ್ಲೇ ನಿಲ್ಲಿಸಿಕೊಳ್ಳುವ ಪ್ರಯತ್ನ.

ವಿದ್ಯಾ ಎನ್. ಪೈ, ಕಾಸರಕೋಡ
*ಮದುವೆ ಋಣಾನುಬಂಧವೋ, ಹಣಾನುಬಂಧವೋ?*
ಸಾಲ ಮಾಡಿ ಮದುವೆ ನೆರವೇರಿಸಿದ ಕನ್ಯಾಪಿತೃವಿಗಂತೂ 'ಋಣಾ'ನುಬಂಧ.

ರವಿ ಎಂ. ಪೈ, ಹೊನ್ನಾವರ
*ಮಟಕಾಗೂ, ಗುಟಕಾಗೂ ಏನು ವ್ಯತ್ಯಾಸ?*
ಚಟಕ್ಕೊಂದು, ಚಟ್ಟಕ್ಕೊಂದು.

ಬೂಕನಕೆರೆ ವಿಜೇಂದ್ರ, ಮೈಸೂರು
*ಕೆಲವೊಮ್ಮೆ ಸ್ನೇಹಿತರೇ ಶತ್ರುಗಳಾಗುತ್ತಾರಲ್ಲಾ...?*
ಛೆ! ಅವರು ಸ್ನೇಹಿತರಲ್ಲ; ಸಿನೇಹಿತರು, ಬಾರ್‌ಹಿತರು, ಮಾಲ್‌ಹಿತರು, ಕ್ಲಬ್‌ಹಿತರು...

## ಬಹುಮಾನಿತ ಪ್ರಶ್ನೆ

ಜಾಕೋಬ್ ಡಿಸೋಜ, ಕುರುವಳ್ಳಿ
*ಕೆಲವು ಹದಿಹರೆಯದವರು ಮುಂದೊಂದು ದಿನ ತಾವೂ ಮುದುಕರಾಗುತ್ತೇವೆಂದು ತಿಳಿದುಕೊಳ್ಳುವುದಿಲ್ಲವಲ್ಲ...?*
ಮಗುವೂ ಲೈನ್ ಹೊಡೆಯುವ ಪಡ್ಡೆ ಹುಡುಗನಾಗುತ್ತೇನೆಂದು ತಿಳಿದಿರುವುದಿಲ್ಲ. ಆಗಾಗಿನದು ಆಗಾಗಾಗಲಿ ಬಿಡಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹೆಣ್ಣುಗಳನ್ನು ನೋಡುತ್ತಿದ್ದರೆ ಕಣ್ಣುಗಳಿಗೆ ತಂಪು ಅಂತಾರಲ್ಲಾ, ಅದು ಹೇಗೆ?*
ಮುಖ– ಕಮಲ, ನಯನ– ದುಂಬಿ, ಮೂಗು– ಸಂಪಿಗೆ, ದಂತ– ದಾಳಿಂಬೆ... ಪ್ರಕೃತಿಯ ನೋಟ ಕಣ್ಣಿಗೆ ತಂಪೇ.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ
*ಆ ಸರ್ವಜ್ಞ ಬೊಜ್ಜಿನ ಗಿಡ್ಡ ಹೆಂಡತಿ ಲೇಸು ಎಂದ. ಏಕೆ?*
ಹೆಂಡತಿಯು 'ಓಡಿಹೋಗದಂತೆ' ಮತ್ತು 'ಹೈ ಲೆವೆಲ್' ತೋರದಂತೆ ಇರಬೇಕೆಂಬ ಆಶಯವಂತೆ.

ಮುರಲೀಧರ ಕುಲಕರ್ಣಿ, ಬೀದರ
*'ಮತದಾನ' ಎಂಬ ಪದಪ್ರಯೋಗ ಸರಿಯಾದುದೆ?*



ಊಹೂಂ. ಈಗಿನದು ಮತಬಿಕರಿ; ಆಯ್ಕೆಯಾದವನು 'ಮತ್ತದಾನವ'.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕಾಲಕ್ಕೆ ತಕ್ಕಂತೆ ಕುಣಿಯುವವರು ಯಾರು?*
ಚಿಯರ್ ಗರ್ಲ್ಸ್.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಿಮ್ಮ ಆದೇಶವನ್ನು ಪಾಲಿಸುವ ಆಂಜನೇಯ ನಿಮಗೆ ದೊರಕಿದ್ದಾನೆಯೆ ರಾಂ?*
ಊಹೂಂ. ಇನ್ನೂ ಎಲ್ಲೆಲ್ಲೂ ಮಾಯಾಮೃಗಗಳೇ ಇರುವ ಅರಣ್ಯ ಕಾಂಡದಲ್ಲೇ ಇದ್ದೇನೆ.

■ ರಾಮ್